# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

ಮೆಸ್ಕಾಂ

MESCOM

## MANGALORE ELECTRICITY SUPPLY COMPANY LIMITED

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಸಂಖ್ಯೆ: 0824-2885766

CIN:U40109KA2002SGCO30425


ಸಂಖ್ಯೆ: ಪ್ರ.ವ್ಯ/ಸ.ಪ್ರ.ವ್ಯ(ಆ)/ಲೆ(ಆ)/ಸುತ್ತೋಲೆ/ಹಿಸ-115/2020-21/cys-12 ದಿನಾಂಕ: 5/08/2020

ಕಾರ್ಯನಿರ್ವಾಹಕ ಇಂಜಿನಿಯರ್ (ವಿ) (ಮಾಹಿತಿ ತಂತ್ರಜ್ಞಾನ) ಮಂ.ವಿ.ಸ.ಕಂ.ನಿ., ಮಂಗಳೂರು
ಸಂಖ್ಯೆ: 266
ದಿನಾಂಕ: 6-8-2020

## ಸುತ್ತೋಲೆ

ವಿಷಯ: ಕರ್ತವ್ಯದ ಅವಧಿಯಲ್ಲಿನ ಕಾರ್ಯವೈಖರಿ ಬಗ್ಗೆ.

****

ಮೆಸ್ಕಾಂ., ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಸಾರ್ವಜನಿಕ ಹಿತಾಸಕ್ತಿಗೆ ಅನುಸಾರವಾಗಿ ಕಾರ್ಯನಿರ್ವಹಿಸಬೇಕಾಗಿದ್ದು ಕರ್ತವ್ಯ ನಿರ್ವಹಣೆಯಲ್ಲಿ ಹಾಗೂ ಶಿಸ್ತು ಮತ್ತು ನಡತೆಯಲ್ಲಿ ಇತರರಿಗೆ ಮಾದರಿಯಾಗಿ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಆದರೆ, ಇತ್ತೀಚೆಗೆ ಕೆಲವು ಅಧಿಕಾರಿ/ನೌಕರರು ತಮ್ಮ ಮತ್ತು ಕಂಪನಿಯ ಘನತೆ ಗೌರವಗಳಿಗೆ ಚ್ಯುತಿಯಾಗುವಂತೆ ಕೆಲಸ ನಿರ್ವಹಿಸುತ್ತಿರುವುದು, ಕರ್ತವ್ಯದ ವೇಳೆಯಲ್ಲಿ ಪಾನಮತ್ತರಾಗಿರುವುದು, ಅವ್ಯಾಚ್ಯ ಶಬ್ದಗಳಿಂದ ಬೈಯುವುದು, ತಮ್ಮ ಸಹದ್ಯೋಗಿಗಳಿಗೆ ಮತ್ತು ಹಿರಿಯ/ಕಿರಿಯ ಅಧಿಕಾರಿಗಳಿಗೆ ಗೌರವ ನೀಡದಿರುವುದು ಇಂತಹ ವಿಷಯಗಳು ಮಾಧ್ಯಮದಲ್ಲಿ ಪ್ರಕಟವಾಗುತ್ತಿರುವುದು ಗಮನಿಸಲಾಗಿದ್ದು, ಇದನ್ನು ಕಂಪನಿಯು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ.

ಮುಂದುವರೆದು, ಕಂಪನಿಯ ಅಧಿಕಾರಿ/ನೌಕರರ ಈ ಕೆಳಗಿನ ದುರ್ನಡತೆಯನ್ನು ಗಮನಿಸಲಾಗಿದೆ.

1. ಕಂಪನಿ ಆಸ್ತಿ ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ವಂಚನೆ ಅಥವಾ ಅಪ್ರಮಾಣಿಕತೆ.
2. ಯಾವುದೇ ರೀತಿಯಲ್ಲಿ ಲಂಚ ತೆಗೆದುಕೊಳ್ಳುವುದು ಅಥವಾ ನ್ಯಾಯಬಾಹಿರ ಪ್ರತಿಫಲ ಪಡೆಯುವುದು.
3. ಕಛೇರಿಗೆ ವಿಳಂಬವಾಗಿ ಬರುವ ಅಥವಾ ಗೈರು ಹಾಜರಾಗುವ ಅಭ್ಯಾಸ ಇತ್ಯಾದಿ.

ಕಛೇರಿಗೆ ವಿಳಂಬವಾಗಿ ಆಗಮಿಸುವುದು ಹಾಗೂ ಕರ್ತವ್ಯದ ಅವಧಿಯಲ್ಲಿ ಮದ್ಯಪಾನ ಮಾಡಿ ಕಾರ್ಯನಿರ್ವಹಿಸುವುದು ಮತ್ತು ದುರ್ನಡತೆ ಎಸಗುವುದು ಕವಿಮಂ., ನೌಕರರ ಸೇವಾ (ನಡತೆ) ನಿಯಮಗಳು 1988 ನಿಯಮಗಳ ಉಲ್ಲಂಘನೆಯಾಗಿರುತ್ತದೆ.

ಆದ್ದರಿಂದ, ಕಂಪನಿಯ ಯಾವುದೇ ಅಧಿಕಾರಿ/ನೌಕರರು ಕಛೇರಿಗೆ ಪಾನಮತ್ತರಾಗಿ ಆಗಮಿಸಿದಲ್ಲಿ ಹಾಗೂ ಕರ್ತವ್ಯದ ಅವಧಿಯಲ್ಲಿ ಮದ್ಯಪಾನ ಮಾಡಿ ಕಾರ್ಯನಿರ್ವಹಿಸುವುದು ಅಥವಾ ಯಾವುದೇ ದುರ್ನಡತೆ ಎಸಗುವುದು ಕಂಡುಬಂದಲ್ಲಿ ಅಂತಹ ಅಧಿಕಾರಿ/ನೌಕರರ ವಿರುದ್ಧ ಸಂಬಂಧಿತ ಕಛೇರಿ ಮುಖ್ಯಸ್ಥರು ತಮ್ಮ ಮೇಲಾಧಿಕಾರಿಗಳಿಗೆ ವರದಿ ನೀಡುವಂತೆ ಹಾಗೂ ಅಂತಹ ಕರ್ತವ್ಯಲೋಪವೆಸಗುವ ಅಧಿಕಾರಿ/ನೌಕರರ ವಿರುದ್ಧ ಸಂಬಂಧಿತ ಶಿಸ್ತುಪ್ರಾಧಿಕಾರಿಗಳು ಕವಿಮಂ ನೌಕರರ ಸೇವಾ(ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1987ರನ್ವಯ ಶಿಸ್ತುಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಆದೇಶದ ಮೇರೆಗೆ,

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರಿಂದ ಅನುಮೋದಿತವಾಗಿದೆ"

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)(ಪ್ರ)
ಮೆಸ್ಕಾಂ.,

NEED com e-mail it wing

2.....

Z:\Prem -2020-21\circular.docx

**ಪ್ರತಿಗಳು:**

1. ಮುಖ್ಯ ಇಂಜಿನಿಯರ್(ವಿ), ಮೆಸ್ಕಾಂ., ಮಂಗಳೂರು/ಶಿವಮೊಗ್ಗ ವಲಯ.
2. ಅಧೀಕ್ಷಕ ಇಂಜಿನಿಯರ್(ವಿ)(ತಾಂತ್ರಿಕ/ವಾಣಿಜ್ಯ/ಖರೀದಿ/ಯೋಜನೆ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
3. ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ವೃತ್ತ, ಮಂಗಳೂರು/ಉಡುಪಿ/ ಚಿಕ್ಕಮಗಳೂರು/ಶಿವಮೊಗ್ಗ.
4. ಅಧೀಕ್ಷಕ ಇಂಜಿನಿಯರ್(ವಿ), ಡಿ.ಸಿ.ಸಿ & ಸ್ಕಾಡಾ/ಆರ್.ಟಿ.ವೃತ್ತ/ ಮಾ.ಸಂ.ಅ. ಕೇಂದ್ರ, ಮೆಸ್ಕಾಂ., ಮಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
6. ಕಂಪನಿ ಕಾರ್ಯದರ್ಶಿ, ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
7. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐ.ಟಿ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು-**ಮೆಸ್ಕಾಂ., ಜಾಲತಾಣದಲ್ಲಿ ಪ್ರಕಟಿಸುವುದು.**

(1–7:) **ತಮ್ಮ ಅಧೀನ ಅಧಿಕಾರಿ/ನೌಕರರಿ[ಗೆ] ಈ ಬಗ್ಗೆ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.**

8. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ವಿಭಾಗ, ಮಂಗಳೂರು-1/ಮಂಗಳೂರು-2/ ಬಂಟ್ವಾಳ/ ಪುತ್ತೂರು/ ಉಡುಪಿ/ಕುಂದಾಪುರ/ ಶಿವಮೊಗ್ಗ/ಶಿಕಾರಿಪುರ/ ಸಾಗರ/ಭದ್ರಾವತಿ/ಚಿಕ್ಕಮಗಳೂರು/ ಕೊಪ್ಪ/ಕಡೂರು-**ತಮ್ಮ ಅಧೀನ ಉಪವಿಭಾಗ ಮತ್ತು ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.**
9. ಲೆಕ್ಕಾಧಿಕಾರಿ(ಸಾ,ಸಂ&ಸಂ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
10. ಹಿರಿಯ ಆಪ್ತ ಕಾರ್ಯದರ್ಶಿ, ವ್ಯ.ನಿ/ನಿ(ತಾಂ), ಮೆಸ್ಕಾಂ.,
11. ಆಪ್ತ ಕಾರ್ಯದರ್ಶಿ, ಮು.ಆ.ಅ./ಆ.ಸ(ಆಂ.ಪ), ಮೆಸ್ಕಾಂ.,

(9–11:) **ತಮ್ಮ ಅಧೀನ ಅಧಿಕಾರಿ/ನೌಕರರಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.**



Z:\Prem -2020-21\circular.docx